RNU AIR DHARWAD

# SEPTEMBER 06, 2024

## AKASHAVANI - DHARWAD

## PRADESH SAMACHARA (KANNADA) 07.05 A.M.

<><><>

**ಆಕಾಶವಾಣಿ**

**ಪ್ರದೇಶ ಸಮಾಚಾರ**

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು:**

<><><>

- **ಎತ್ತಿನಹೊಳೆ ಯೋಜನೆ; ಮೊದಲ ಹಂತದ ನೀರೆತ್ತುವ ಕಾರ್ಯಕ್ಕೆ, ಮುಖ್ಯಮಂತ್ರಿ ಇಂದು ಚಾಲನೆ.**
- **ಬೇಡ್ತಿ ಹಾಗೂ ವರದಾ ನದಿ ಜೋಡಣೆ; ಕಾರ್ಯರೂಪಕ್ಕೆ ತರಲು, ಯೋಜನೆ – ಎನ್.ಎಸ್. ಬೋಸರಾಜು.**
- **ಸಂಪೂರ್ಣತಾ ಅಭಿಯಾನ; ಬೀದರ್ ಜಿಲ್ಲೆಯ ಜೌರಾದ್‌ನಲ್ಲಿ, ನಾಲ್ಕು ಇಲಾಖೆಗಳ ಅಭಿವೃದ್ಧಿ ಯೋಜನೆಗಳು, ಪ್ರಗತಿಯಲ್ಲಿ.**
- **ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ; ಇಂದು ಸಂಸ್ಥಾಪನಾ ದಿನಾಚರಣೆ ಹಾಗೂ ಮರು ನಾಮಕರಣ.**

<><><>

**ಈಗ ವಾರ್ತೆಗಳ ವಿವರ**

<><><>

**ಕೋಲಾರ ಮತ್ತು ಚಿಕ್ಕಬಳ್ಳಾಪುರ ಸೇರಿದಂತೆ, 7 ಬರ ಪೀಡಿತ ಜಿಲ್ಲೆಗಳಿಗೆ ಕುಡಿಯುವ ನೀರನ್ನು ಪೂರೈಸಲು, ಎತ್ತಿನಹೊಳೆ ಯೋಜನೆಯ ಮೊದಲ ಹಂತದ ನೀರೆತ್ತುವ ಕಾರ್ಯಕ್ಕೆ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ ಇಂದು ಚಾಲನೆ ನೀಡಲಿದ್ದಾರೆ. ಹಾಸನ ಜಿಲ್ಲೆ, ಸಕಲೇಶಪುರ ತಾಲೂಕು, ಹೆಬ್ಬನಹಳ್ಳಿಯ ವಿತರಣಾ ತೊಟ್ಟಿ ನಾಲ್ಕರ ಬಳಿ, ಇಂದು ಮಧ್ಯಾಹ್ನ 12 ಗಂಟೆಗೆ, ಜಲ ಸಂಪನ್ಮೂಲ ಇಲಾಖೆಯ ವಿಶ್ವೇಶ್ವರಯ್ಯ ಜಲ ನಿಗಮ ನಿಯಮಿತ ಆಯೋಜಿಸಿರುವ ಈ ಕಾರ್ಯಕ್ರಮದಲ್ಲಿ, ಹಲವು ಗಣ್ಯರು ಪಾಲ್ಗೊಳ್ಳಲಿದ್ದಾರೆ.**

<><><>

**ಎತ್ತಿನಹೊಳೆ ಯೋಜನೆಯಿಂದ 24 ಟಿ.ಎಂ.ಸಿ ಅಡಿ ನೀರನ್ನು, ಹಂತ ಹಂತವಾಗಿ ವಾಣಿವಿಲಾಸ ಸಾಗರ ಹಾಗೂ ತುಮಕೂರಿನ ವರೆಗೂ ಹರಿಸಲಾಗುತ್ತಿದೆ ಎಂದು, ಜಲ ಸಂಪನ್ಮೂಲ ಖಾತೆ ಸಚಿವ ಡಿ.ಕೆ. ಶಿವಕುಮಾರ ಬೆಂಗಳೂರಿನಲ್ಲಿ ತಿಳಿಸಿದ್ದಾರೆ.**

<><><>

ಎತ್ತಿನಹೊಳೆ ಯೋಜನೆ, ಚಿಕ್ಕಮಗಳೂರು, ಹಾಸನ, ತುಮಕೂರು, ಬೆಂಗಳೂರು ಗ್ರಾಮಾಂತರ, ರಾಮನಗರ, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗಳಿಗೆ, ಕುಡಿಯುವ ನೀರು ಒದಗಿಸುವ ಮಹತ್ವಾಕಾಂಕ್ಷಿ ಯೋಜನೆಯಾಗಿದೆ ಎಂದು, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್. ಬೋಸರಾಜು ನುಡಿದರು.

<><><>

ಎತ್ತಿನಹೊಳೆ ಯೋಜನೆ, ಮೊದಲನೇ ಹಂತದ ನೀರೆತ್ತುವ ಕಾರ್ಯಕ್ಕೆ ಚಾಲನೆ ದೊರೆಯುತ್ತಿರುವುದು ಸ್ವಾಗತಾರ್ಹ ಎಂದು, ಸಂಸದ ಕೆ.ಸುಧಾಕರ್, ಚಿಕ್ಕಬಳ್ಳಾಪುರದಲ್ಲಿ ಸುದ್ದಿಗಾರರಿಗೆ ಹೇಳಿದರು.

<><><>

ಕೃಷಿ ಹಾಗೂ ಕುಡಿಯುವ ನೀರಿನ ಸಮಸ್ಯೆ ನಿವಾರಿಸಲು, ಅಂತರ್ಜಲ ಮಟ್ಟ ಹೆಚ್ಚಿಸಲು, ಮರುಪೂರಣ ಮೊದಲ ಆದ್ಯತೆಯಾಗಿದೆ. ಬೇಡ್ತಿ ಹಾಗೂ ವರದಾ ನದಿ ಜೋಡಣೆ ಕಾರ್ಯರೂಪಕ್ಕೆ ತರಲು, ಪ್ರಯತ್ನಿಸುವುದಾಗಿ, ಸಣ್ಣ ನೀರಾವರಿ ಖಾತೆ ಸಚಿವ ಎನ್.ಎಸ್. ಬೋಸರಾಜು, ತಿಳಿಸಿದ್ದಾರೆ. ಹಾವೇರಿ ಜಿಲ್ಲೆ ಹಾನಗಲ್‌ನಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ತಾಲೂಕಿನ ವರದಾ ಹಾಗೂ ಧರ್ಮಾ ನದಿಗಳಿಗೆ ಚೆಕ್ ಡ್ಯಾಮ್‌ಗಳನ್ನು ನಿರ್ಮಿಸಿ, ಅಂತರ್ಜಲ ಮರಪೂರಣಕ್ಕೆ ಯೋಜಿಸಲಾಗುವುದು ಎಂದರು.

<><><>

ಉತ್ತರಕನ್ನಡ ಜಿಲ್ಲೆ, ಯಲ್ಲಾಪುರ ತಾಲೂಕಿನ ನಾಲ್ಕು ಅಪರೂಪದ ಜೀವ ವೈವಿಧ್ಯ ತಾಣಗಳಿಗೆ, ಜೀವ ವೈವಿಧ್ಯ ನಿರ್ವಹಣಾ ಸಮಿತಿ ಮಾನ್ಯತೆ ನೀಡಿ, ದಾಖಲೀಕರಣ ಆರಂಭಿಸಿದೆ. ಚಂದ್ಗುಳಿ ಪಂಚಾಯ್ತಿ ಆವರಣದಲ್ಲಿ, ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ ಹರ್ಷಭಾನು, ಜೀವ ವೈವಿಧ್ಯ ಮಂಡಳಿಯ ನಿಕಟಪೂರ್ವ ಅಧ್ಯಕ್ಷ ಅನಂತ ಹೆಗಡೆ ಅಶೀಸರ ಅವರು ಪಾಲ್ಗೊಂಡು, ಸ್ಥಳೀಯರ ಸಹಕಾರ ಮತ್ತು ಸಮುದಾಯದ ಸಹಭಾಗಿತ್ವದಲ್ಲಿ, ಜೀವ ವೈವಿಧ್ಯ ನಿರ್ವಹಣೆ ನೀಲನಕ್ಷೆ ಸಿದ್ಧ ಪಡಿಸಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಯಲ್ಲಾಪುರ ತಾಲೂಕು ಜೀವ ವೈವಿಧ್ಯ ನಿರ್ವಹಣಾ ಸಮಿತಿ ಸದಸ್ಯ, ಪರಿಸರವಾದಿ ನರಸಿಂಹ ಸಾತೊಡ್ಡಿ.

<><><>

ಪರಿಸರವಾದಿ ನರಸಿಂಹ ಸಾತೊಡ್ಡಿ ಧ್ವನಿ 35 ಸೆಕೆಂದುಗಳು

<><><>

ಅಧಿಕ ಮಳೆ, ಮೋಡ ಕವಿದ ವಾತಾವರಣ, ತೋಟದಲ್ಲಿ ನೀರು ನಿಲ್ಲುವಿಕೆ, ಹೆಚ್ಚಾದ ಮಣ್ಣಿನ ತೇವಾಂಶ, ಅಧಿಕ ಆದ್ರತೆ, ಸೂರ್ಯನ ಬೆಳಕಿನ ಕೊರತೆಯಿಂದ ಅಡಕೆ ಮರಗಳಿಗೆ ಕೊಳೆ ರೋಗ ಬಾಧಿಸುತ್ತಿದೆ ಎಂದು, ಶಿವಮೊಗ್ಗದ, ನವಿಲೆ ಅಡಕೆ ಸಂಶೋಧನಾ ಕೇಂದ್ರದ ಮುಖ್ಯಸ್ಥ ನಾಗರಾಜಪ್ಪ ಅಡಿವಪ್ಪರ್, ತಿಳಿಸಿದ್ದಾರೆ. ಕೊಳೆ ರೋಗ ಹೆಚ್ಚಿ, ಅಡಕೆಯನ್ನು ಬಾಧಿಸದಂತೆ, ತೋಟಗಳಲ್ಲಿ ಹೆಚ್ಚಿನ ನೀರು ನಿಲ್ಲದಂತೆ, ಬಸಿಗಾಲುವೆ ಚೊಕ್ಕ ಮಾಡಿ, ನೀರು ಹರಿದು ಹೋಗಲು ವ್ಯವಸ್ಥೆ ಮಾಡಬೇಕು, ಕೊಳೆ ಬಾಧೆಯಿಂದ ಉದುರಿದ ಕಾಯಿಗಳನ್ನು ಹೆಕ್ಕಿ, ಹೊರಗಡೆ ಹಾಕಬೇಕು. ಸುಳಿ ಕೊಳೆ ಅಥವಾ ಶಿರ ಕೊಳೆಯಿಂದ ಅಡಕೆ ಮರ ಸಾಯುವುದನ್ನು ತಪ್ಪಿಸಲು, ನಿಗದಿತ ದ್ರಾವಣ ಸಂಪಡಣೆ ವಿವರಕ್ಕೆ ತೋಟಿಗರು, ಅಡಕೆ ಸಂಶೋಧನಾ ಕೇಂದ್ರವನ್ನು ಸಂಪರ್ಕಿಸಬಹುದು ಎಂದು, ಅವರು ಮಾಹಿತಿ ನೀಡಿದ್ದಾರೆ.

<><><>

"ಏಕ್ ಪೇಢ್ ಮಾ ಕೆ ನಾಮ್" ಅಭಿಯಾನದಡಿ, ಆಕಾಶವಾಣಿ ಭದ್ರಾವತಿ ಕೇಂದ್ರದ ಆವರಣದಲ್ಲಿ, ಅಪರ ಸಿವಿಲ್ ನ್ಯಾಯಾಧೀಶ ವಿ. ರವಿಕುಮಾರ ಸಸಿ ನೆಟ್ಟು ಚಾಲನೆ ನೀಡಿದರು. ಉಪ ವಲಯ ಅರಣ್ಯ ಸಂರಕ್ಷಣಾಧಿಕಾರಿ, ಎಂ.ವಿ.

ಆಶೀಶ್ ರೆಡ್ಡಿ, ಅಪರ ಸಿವಿಲ್ ನ್ಯಾಯಾಧೀಶ ಮಹಮ್ಮದ್ ಅಲಿ ನಾಯಕ್, ಆಕಾಶವಾಣಿ ಕೇಂದ್ರದ ಮುಖ್ಯಸ್ಥ ಎಸ್.ಆರ್. ಭಟ್, ತಾಂತ್ರಿಕ ವಿಭಾಗದ ಮುಖ್ಯಸ್ಥ ಬಿ.ಎಸ್.ನಟೇಶ್ ರಾಮನ್ ಸೇರಿದಂತೆ, ಗಣ್ಯರು ಪಾಲ್ಗೊಂಡಿದ್ದರು.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಕೇಂದ್ರ ಸರ್ಕಾರದ ನೀತಿ ಆಯೋಗ ಸಂಚಾಲಿತ, ಸಂಪೂರ್ಣತಾ ಅಭಿಯಾನದಡಿ, ಬೀದರ್ ಜಿಲ್ಲೆಯ ಔರಾದ್ ತಾಲೂಕಿನಲ್ಲಿ, ಒಟ್ಟು ನಾಲ್ಕು ಇಲಾಖೆಗಳ ಅಭಿವೃದ್ಧಿ ಯೋಜನೆಗಳು ಪ್ರಗತಿಯಲ್ಲಿವೆ. ಔರಾದ್ ತಾಲೂಕು ಸಂಪೂರ್ಣತಾ ಅಭಿಯಾನ ಯೋಜನೆಯ, ಮಹತ್ವಾಕಾಂಕ್ಷಿ ತಾಲೂಕಿನ, ಆಶೋತ್ತರ ಘಟಕದ ಫೆಲೋ, ಆನಂದ ರಮೇಶ್ ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ.

<><><>

ಫೆಲೋ ಆನಂದ ರಮೇಶ ಧ್ವನಿ 40 ಸೆಕೆಂದುಗಳು

<><><>

ಉತ್ತರ ಕರ್ನಾಟಕದ ಪ್ರತಿಷ್ಠಿತ ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆಯ, ಸಂಸ್ಥಾಪನಾ ದಿನವಿಂದು. ಕಿಮ್ಸ್ ಆಸ್ಪತ್ರೆ, ಇಂದಿನಿಂದ ಕರ್ನಾಟಕ ಮೆಡಿಕಲ್ ಕಾಲೇಜ್ ಆಂಡ್ ರಿಸರ್ಚ್ ಇನ್ಸ್ಟಿಟ್ಯೂಟ್ ಆಗಿ, ಮರು ನಾಮಕರಣಗೊಳ್ಳುತ್ತಿದೆ. ಜಿಲ್ಲಾ ಉಸ್ತುವಾರಿ ಸಚಿವ ಸಂತೋಷ ಲಾಡ್ ಸೇರಿದಂತೆ, ಅನೇಕ ಗಣ್ಯರು ಇಂದು ಬೆಳಗ್ಗೆ 10.30ಕ್ಕೆ ಆಯೋಜಿತ ಕಾರ್ಯಕ್ರಮದಲ್ಲಿ, ಪಾಲ್ಗೊಳ್ಳಲಿದ್ದಾರೆ. ಪ್ರದೇಶ ಸಮಾಚಾರಕ್ಕಾಗಿ ಹೆಚ್ಚಿನ ಮಾಹಿತಿ ನೀಡಿದ್ದಾರೆ, ಕಿಮ್ಸ್ ಹುಬ್ಬಳ್ಳಿ ನಿರ್ದೇಶಕ ಡಾಕ್ಟರ್ ಎಸ್.ಎಫ್. ಕಮ್ಮಾರ.

<><><>

ಕಿಮ್ಸ್ ನಿರ್ದೇಶಕ ಡಾ. ಎಸ್.ಎಫ್. ಕಮ್ಮಾರ ಧ್ವನಿ 38 ಸೆಕೆಂದುಗಳು

<><><>

ವಿಶ್ವ ಸಂಸ್ಥೆಯ ಸಾಮಾನ್ಯ ಸಭೆ ನಿರ್ಣಯದಂತೆ, ಪ್ರತಿ ವರ್ಷ ಸೆಪ್ಟೆಂಬರ್ 15 ರಂದು ಅಂತಾರಾಷ್ಟ್ರೀಯ ಪ್ರಜಾಪ್ರಭುತ್ವ ದಿನಾಚರಣೆ, ಆಚರಿಸಲಾಗುತ್ತದೆ. ಅಂದು ಬೀದರ್ ನಿಂದ ಚಾಮರಾಜನಗರದ ವರೆಗೆ, ಎರಡೂವರೆ ಸಾವಿರ ಕಿಲೋ ಮೀಟರ್ ಉದ್ದದ, ಮಾನವ ಸರಪಳಿ ನಿರ್ಮಿಸಿ, ಜನ ಜಾಗ್ರತಿ ಮೂಡಿಸಲಾಗುವುದು ಎಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ತಿಳಿಸಿದ್ದಾರೆ. ಬೆಂಗಳೂರಿನಲ್ಲಿ ಅವರು ಪೂರ್ವಭಾವಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

<><><>

ಧಾರವಾಡ ಜಿಲ್ಲೆಯಲ್ಲಿ ತೇಗೂರ ಗ್ರಾಮದಿಂದ ಮಾವಿನಕೊಪ್ಪ ಗ್ರಾಮದ ವರೆಗೆ, 55 ಸಾವಿರ ಜನರಿಂದ, ಮಾನವ ಸರಪಳಿ ನಿರ್ಮಿಸಲಾಗುತ್ತದೆ ಎಂದು ಜಿಲ್ಲಾಧಿಕಾರಿ ದಿವ್ಯಾ ಪ್ರಭು ತಿಳಿಸಿದ್ದಾರೆ.

<><><>

ಮಂಡ್ಯ ಜಿಲ್ಲೆ ಮದ್ದೂರಿನ ನಿಡಘಟ್ಟ ಗ್ರಾಮದಿಂದ, ಶ್ರೀರಂಗಪಟ್ಟಣದ ಸಿದ್ದಲಿಂಗಪುರದ ವರೆಗೆ, 62 ಕಿಲೋ ಮೀಟರ್ ವರೆಗೆ, ಮಾನವ ಸರಪಳಿ ನಿರ್ಮಿಸಿ, ಪ್ರಜಾಪ್ರಭುತ್ವ ದಿನ ಆಚರಿಸಲಾಗುತ್ತಿದೆ ಎಂದು, ಜಿಲ್ಲಾಧಿಕಾರಿ ಡಾಕ್ಟರ್ ಕುಮಾರ ಹೇಳಿದ್ದಾರೆ.

<><><>

ರಾಜ್ಯ ಬಯಲಾಟ ಅಕಾದೆಮಿ, ಬೆಳಗಾವಿ ಜಿಲ್ಲೆ ಹುಕ್ಕೇರಿಯಲ್ಲಿ ಆಯೋಜಿಸಿರುವ, ಎರಡು ದಿನಗಳ, 'ಸಣ್ಣಾಟಗಳ ಸಮ್ಮೇಳನ'ವನ್ನು ಹಿರಿಯ ವಿದ್ವಾಂಸ, ಧಾರವಾಡದ ಡಾಕ್ಟರ್ ವೀರಣ್ಣ ರಾಜೂರ ಉದ್ಘಾಟಿಸಿದರು. ರಾಧಾನಾಟ, ಸಂಗ್ಯಾ–ಬಾಳ್ಯಾ, ಬಸವಂತ–ಬಲವಂತ, ಶರಣರ ಆಟ ಮುಂತಾದ ಬಯಲಾಟಗಳ ಕಲಾವಿದರು ಹಾಗೂ ತಂಡಗಳಿಗೆ ಪ್ರೋತ್ಸಾಹ ನೀಡಲು, ಅಕಾದೆಮಿ ಸಣ್ಣಾಟಗಳ ಪ್ರದರ್ಶನ ಆಯೋಜಿಸಿದೆ. ಪೌರಾಣಿಕ, ಐತಿಹಾಸಿಕ ಮತ್ತು ಸಾಮಾಜಿಕ ಕಥೆಗಳನ್ನಾಧರಿಸಿದ, ಸಣ್ಣಾಟಗಳು ಬೆಳಗಾವಿ ಜಿಲ್ಲೆಯ ಹಳ್ಳಿ–ಹಳ್ಳಿಗಳ ಮನೆಮಾತಾಗಿವೆ. ಬಯಲಾಟ ಅಕಾದೆಮಿ ಅಧ್ಯಕ್ಷ ಡಾಕ್ಟರ್ ಕೆ.ಆರ್.ದುರ್ಗಾದಾಸ್ ಪಾಲ್ಗೊಂಡಿದ್ದರು.

<><><>

ಎಚ್.ಐ.ವಿ. ಹಾಗೂ ಏಡ್ಸ್ ಜನ ಜಾಗೃತಿಗಾಗಿ, ಬಳ್ಳಾರಿ ಜಿಲ್ಲಾ ಕ್ರೀಡಾಂಗಣದಲ್ಲಿ, ಬಳ್ಳಾರಿ ಮತ್ತು ವಿಜಯನಗರ ಜಿಲ್ಲೆಗಳ, ಪದವಿ ಕಾಲೇಜು ವಿದ್ಯಾರ್ಥಿಗಳಿಗೆ, ಪ್ರೊ–ಕಬಡ್ಡಿ ಪಂದ್ಯಾವಳಿ ಆಯೋಜಿಸಿತ್ತು. ಕಬಡ್ಡಿ ಪಂದ್ಯಾವಳಿಗೆ ಬಳ್ಳಾರಿ ಪಾಲಿಕೆಯ ಮೇಯರ್ ಮುಲ್ಕಂಗಿ ನಂದೀಶ ಚಾಲನೆ ನೀಡಿದರು. ಜಿಲ್ಲಾ ಆರೋಗ್ಯಾಧಿಕಾರಿ ಡಾಕ್ಟರ್ ಯಲ್ಲಾ ರಮೇಶಬಾಬು ಮಾತನಾಡಿ, ಬಳ್ಳಾರಿ ಜಿಲ್ಲೆಯಲ್ಲಿ ಜನ ಜಾಗೃತಿಯಿಂದಾಗಿ, ಎಚ್.ಐ.ವಿ. ಪ್ರಕರಣಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಆದರೆ, ಯುವಜನರಲ್ಲಿ ಹೆಚ್ಚುತ್ತಿದೆ ಎಂದರು. ರಾಜ್ಯ ಏಡ್ಸ್ ಪ್ರಿವೆನ್ಷನ್ ಸೊಸೈಟಿ ಹಾಗೂ ಬಳ್ಳಾರಿ ಜಿಲ್ಲಾ ಅಮೇಚೂರು ಕಬಡ್ಡಿ ಅಸೋಷಿಯೇಷನ್ ಆಯೋಜಿಸಿದ ಕಬಡ್ಡಿ ಪಂದ್ಯಾವಳಿಯಲ್ಲಿ, ನಾಲ್ಕು ಮಹಿಳಾ ಹಾಗೂ ಆರು ಪುರುಷರ ತಂಡಗಳು ಭಾಗವಹಿಸಿದ್ದವು.

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಿಂದ, ನಾಗಸಂದ್ರ ನಿಲ್ದಾಣದ ವರೆಗೆ ಇಂದು ಪೂರ್ಣ ದಿನ, ಮೆಟ್ರೋ ರೈಲು ಸೇವೆ ಸ್ಥಗಿತವಾಗಲಿದೆ ಎಂದು, ಬಿ.ಎಂ.ಆರ್.ಸಿ.ಎಲ್ ಮಾಹಿತಿ ನೀಡಿದೆ.

<><><>

ಚಂದನವನದ ನಟಿ ಸಂಜನಾ, ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ, ಕೇರಳ ಮಾದರಿಯಲ್ಲಿ ಲೈಂಗಿಕ ದೌರ್ಜನ್ಯ ತನಿಖೆಗೆ ಸಮಿತಿ ರಚಿಸುವಂತೆ ಕೋರಿ, ಮನವಿ ಸಲ್ಲಿಸಿದರು.

<><><>

ವಿಜಯಪುರದಲ್ಲಿ ರಾಷ್ಟ್ರೀಯ ಪೋಷಣ ಮಾಸಾಚರಣೆಗೆ, ಹಿರಿಯ ಸಿವಿಲ್ ನ್ಯಾಯಾಧೀಶ ಅರವಿಂದ ಹಾಗರಗಿ ಚಾಲನೆ ನೀಡಿದರು. 50 ಮಕ್ಕಳ ಆರೋಗ್ಯವನ್ನು ತಪಾಸಿಸಲಾಯಿತು.

<><><>

ಶಿವಮೊಗ್ಗದಲ್ಲಿ ಜಾತ್ಯತೀತ ಜನತಾದಳದ ಜಿಲ್ಲಾ ಮಟ್ಟದ ಕಾರ್ಯಕರ್ತರ ಸಮಾವೇಶವನ್ನು, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಉದ್ಘಾಟಿಸಿದರು.

<><><>

ಗದಗ ಜಿಲ್ಲೆಯಲ್ಲಿ ಬೆಂಬಲ ಬೆಲೆ ಖರೀದಿ ಯೋಜನೆಯಡಿ, ಹೆಸರು ಖರೀದಿಸಲು 56 ಕೇಂದ್ರಗಳನ್ನು ತೆರೆಯಲಾಗಿದೆ. ರೈತರು ಹೆಸರು ನೋಂದಾಯಿಸಬಹುದು.

<><><>

ಬಾಗಲಕೋಟೆ ಜಿಲ್ಲೆಯಲ್ಲಿ, ಈ ತಿಂಗಳ 9ನೇ ತಾರೀಖಿನಿಂದ, 'ಕಾವೇರಿ 2: ಇ–ಆಸ್ತಿ ತಂತ್ರಾಂಶ' ಜಾರಿಗೊಳ್ಳಲಿದೆ.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಎತ್ತಿನಹೊಳೆ ಯೋಜನೆ; ಮೊದಲ ಹಂತದ ನೀರೆತ್ತುವ ಕಾರ್ಯಕ್ಕೆ, ಮುಖ್ಯಮಂತ್ರಿ ಇಂದು ಚಾಲನೆ.
- ಬೇಡ್ತಿ ಹಾಗೂ ವರದಾ ನದಿ ಜೋಡಣೆ; ಕಾರ್ಯರೂಪಕ್ಕೆ ತರಲು, ಯೋಜನೆ – ಎನ್.ಎಸ್. ಬೋಸರಾಜು.
- ಸಂಪೂರ್ಣತಾ ಅಭಿಯಾನ; ಬೀದರ್ ಜಿಲ್ಲೆಯ ಚೌರಾದ್‌ನಲ್ಲಿ, ನಾಲ್ಕು ಇಲಾಖೆಗಳ ಅಭಿವೃದ್ಧಿ ಯೋಜನೆಗಳು, ಪ್ರಗತಿಯಲ್ಲಿ.
- ಹುಬ್ಬಳ್ಳಿಯ ಕಿಮ್ಸ್ ಆಸ್ಪತ್ರೆ; ಇಂದು ಸಂಸ್ಥಾಪನಾ ದಿನಾಚರಣೆ ಹಾಗೂ ಮರು ನಾಮಕರಣ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>